## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 648 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಡಾ|| ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18.08.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆಯ ಆಹಾರ ಇಲಾಖೆಗೆ ಸುಳ್ಳು ದಾಖಲೆಗಳನ್ನು ನೀಡಿ ಬೇರೆ ಹೆಸರಿನ ಆಧಾರ್ ಕಾರ್ಡ್‌ನ್ನು ಅಕ್ರಮವಾಗಿ ಬಳಸಿ ಪಡೆದುಕೊಂಡಿರುವ (ಪಡಿತರ ನಂ.220100209738) ರದ್ದು ಪಡಿಸಬೇಕೆಂದು ಕೋರಿ ತಾಲ್ಲೂಕು ಮಟ್ಟದ ಆಹಾರ ಇಲಾಖೆ ಅಧಿಕಾರಿ, ಇಲಾಖೆ ಅಧಿಕಾರಿಗಳಿಗೆ ಕಳೆದ 6 ತಿಂಗಳುಗಳಿಂದ ಎಷ್ಟು ಮನವಿ ದೂರುಗಳು ಬಂದಿವೆ; (ದೂರು ಸಲ್ಲಿಸಿದವರ ವಿವರ ನೀಡುವುದು) | ದಿನಾಂಕ:12.03.2025 ರಂದು ಶ್ರೀ.ಹೆಚ್.ಆರ್.ರಾಜಗೋಪಾಲ್, ನಂ. 1516/ಬಿ(46/3 ) ರಾಜವಸಂತ , 8ನೇ ಮೇನ್ ಎ ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ ಬೆಂಗಳೂರು-5600110 ರವರು ದೂರು ಅರ್ಜಿ ಸಲ್ಲಿಸಿರುತ್ತಾರೆ. |
| ಆ | ಸರ್ಕಾರ ಈ ವಿಷಯದಲ್ಲಿ ಯಾವ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು) | ವಾದಿ ಮತ್ತು ಪ್ರತಿವಾದಿಗಳಿಗೆ ತಹಸೀಲ್ದಾರ್, ಹೆಚ್.ಡಿ.ಕೋಟೆ ತಾಲ್ಲೂಕು ಇವರು ವಿಚಾರಣಾ ನೋಟೀಸ್ ನೀಡಿ ವಿಚಾರಣೆ ನಡೆಸಿ ಆದೇಶ ನೀಡಿ ಆದೇಶದ ಪ್ರತಿಯನ್ನು ದೂರುದಾರರಿಗೆ ನೀಡಲಾಗಿರುತ್ತದೆ. |
| ಇ | ಪಡಿತರ ಚೀಟಿ ಪಡೆದುಕೊಂಡಿರುವ ಬಗ್ಗೆ ದೂರುದಾರರು ಸಮಗ್ರ ದಾಖಲೆಗಳನ್ನು ಒದಗಿಸಿದರೂ ಪಡಿತರ ಚೀಟಿ ರದ್ದು ಮಾಡದೇ ಇರಲು ಕಾರಣಗಳೇನು? (ಮಾಹಿತಿ ನೀಡುವುದು) | ಪಡಿತರ ಚೀಟಿಯಲ್ಲಿ ವಿಜಯ್ (ಕುಟುಂಬದ ಮುಖ್ಯಸ್ಥರು) ಮತ್ತು ಕಿರಣ್ (ಮೊಮ್ಮಗ) ಎಂದು ನಮೂದಾಗಿರುತ್ತದೆ. ದೂರುದಾರರಾದ ಶ್ರೀ.ಹೆಚ್.ಆರ್.ರಾಜಗೋಪಾಲ್ ರವರು ನನ್ನ ತಂದೆಯವರಾದ ಹಲಗಶೆಟ್ಟಿ ಅವರಿಗೆ ನಾನು ಒಬ್ಬನೇ ಮಗನಾಗಿರುತ್ತೇನೆ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ತಂದೆ ಲಕ್ಷ್ಮೀ ಎಂಬುವವರನ್ನು ಎರಡನೇ ಮದುವೆಯಾಗಿದ್ದು ಅವರಿಗೂ ಸಹ ಮಕ್ಕಳಿರುವುದಿಲ್ಲವೆಂದು ತಿಳಿಸಿರುತ್ತಾರೆ.<br>ಆದರೆ ವಿಜಯಾ ಎಂಬುವವರು ನನ್ನ ತಂದೆಯ ಎರಡನೇ ಹೆಂಡತಿಯಾದ ಲಕ್ಷ್ಮೀ ಎಂಬುವವರ ಮಗಳೆಂದು ಪಡಿತರ ಚೀಟಿಯಲ್ಲಿ ನಮೂದಿಸಿಕೊಂಡಿರುತ್ತಾರೆ ಎಂದು ದೂರು ನೀಡಿರುತ್ತಾರೆ. |

| | | |
|---|---|---|
| | | ಈ ಬಗ್ಗೆ ತಹಸೀಲ್ದಾರ್ ಹೆಚ್.ಡಿ.ಕೋಟೆ ರವರು ತಮ್ಮ ನ್ಯಾಯಾಲಯದಲ್ಲಿ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಿ ವಿಜಯ ಎಂ ಇವರು ನೀಡಿರುವ ವಂಶ ವೃಕ್ಷದ (ಆರ್.ಡಿ. 0038495342146) ಧೃಡೀಕರಣ ಪತ್ರದ ಆಧಾರದ ಮೇಲೆ ಪ್ರಕರಣವನ್ನು ತೀರ್ಮಾನಿಸಿರುತ್ತಾರೆ. ಆಧಾರ್ ಕಾರ್ಡ್ ಮತ್ತು ವಂಶ ವೃಕ್ಷಗಳ ನೈಜತೆ ಹಾಗೂ ವಾರಸ್ಸುದಾರಿಕೆ ಪ್ರಕರಣವು ಸಿವಿಲ್ ಸ್ವರೂಪದಾದ್ದರಿಂದ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಹಾಗೂ ಪ್ರತಿವಾದಿಗಳು ಬಡವರಾಗಿರುವ ಕಾರಣ ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಆಹಾರ ಭದ್ರತೆಯನ್ನು ಒದಗಿಸುವಂತೆ ಆದೇಶಿಸಿರುತ್ತಾರೆ.<br>1. ಪಡಿತರ ಚೀಟಿಯನ್ನು ನೀಡುವಲ್ಲಿ ಆಧಾರ್ ಅನ್ನು ಕಡ್ಡಾಯವಾಗಿ ಪರಿಗಣಿಸುವ ಕಾರಣ ವಿಜಯ ಎಂ ಅವರ ಆಧಾರ್ ಸಂಖ್ಯೆ: 643342037526 ರಲ್ಲಿ ವಿಜಯ ಎಂ ಅವರ ವಿಳಾಸವು Vijaya.M c/o Late Ulaga Shetty ಎಂದು ನಮೂದಾಗಿರುತ್ತದೆ.<br>2. ತಹಸೀಲ್ದಾರ್, ಹೆಚ್.ಡಿ.ಕೋಟೆ ರವರು ಎಂ.ವಿಜಯರವರಿಗೆ ಸಾರ್ವಜನಿಕ ವಿತರಣಾ ಪದ್ಧತಿ ವ್ಯವಸ್ಥೆಯಡಿ ಆಹಾರ ಭದ್ರತೆಯನ್ನು ಒದಗಿಸಲು ಆದೇಶಿಸಿರುತ್ತಾರೆ.<br>3. ಸದರಿ ಪ್ರಕರಣವು ಮೇಲ್ನೋಟಕ್ಕೆ ಸಿವಿಲ್ ಪ್ರಕರಣದಂತೆ ಕಂಡುಬಂದಿರುವ ಕಾರಣ ಗೌರವಾನ್ವಿತ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿ ಪರಿಹಾರವನ್ನು ಕಂಡು ಕೊಳ್ಳಲು ಆದೇಶಿಸಿರುತ್ತಾರೆ.<br>4. ಈ ಹಿನ್ನೆಲೆಯಲ್ಲಿ ಪಡಿತರ ಚೀಟಿಯನ್ನು ರದ್ದು ಪಡಿಸಿರುವುದಿಲ್ಲ. |

ಇ-ಆನಾಸ 223 ಡಿಆರ್ಎ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು